**ಓ.ಎಸ್. 630/2014 ಪಿ.ಡಬ್ಲೂ-1 ಹೆಸರು - ಮಹದೇವಸ್ವಾಮಿ**

**ಸಾಕ್ಷಿಯನ್ನು ದಿನಾಂಕಃ 04.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ರಿಂದ 7 ನೇ ಪ್ರತಿವಾದಿ ಪರ ಶ್ರೀ ಹೆಚ್.ಪಿ.ಎಸ್ ವಕೀಲರಿಂದಃ**

ನಿ.ಪಿ. 19 ರಲ್ಲಿ ಜವನಯ್ಯ ಎನ್ನುವುದನ್ನು ಹೊಡೆದು ಹಾಕಿ ಜವನಪ್ಪ, ರಾಚಯ್ಯ ಹೊಡೆದು ಹಾಕಿ ರಾಚಯ್ಯ ಮಲ್ಲಪ್ಪ ಎಂದು ಬರೆದಿದೆ ಎಂದರೆ ಸರಿ. ಆ ರೀತಿ ಹೊಡೆದು ಬರೆದಿರುವುದು ಯಾರು ಎಂದು ನನಗೆ ಗೊತ್ತಿಲ್ಲ. ಜವನಪ್ಪನಿಗೆ ಮತ್ತೊಂದು ಹೆಸರು ಇರಲಿಲ್ಲ. ಮಲ್ಲಪ್ಪನಿಗೆ ಇಬ್ಬರು ಹೆಂಡತಿಯರು ಇದ್ದು ಮೊದಲನೇ ಹೆಂಡತಿಗೆ ಇಬ್ಬರು ಮಕ್ಕಳು, ಎರಡನೇ ಹೆಂಡತಿಗೆ ಆರು ಜನ ಮಕ್ಕಳು. ಆ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿ.ಪಿ. 19 ರಲ್ಲಿ ತೋರಿಸಿರುವಂತಹ ಸ್ವತ್ತು ಸರ್ಕಾರದಿಂದ ಮಂಜೂರಾಗಿದ್ದು ಅದರಲ್ಲಿ ನನ್ನ ತಂದೆ ಜವನಪ್ಪ ಮನೆ ಕಟ್ಟಿಕೊಂಡಿರುತ್ತಾರೆ. ನಿ.ಪಿ. 19 ಅನ್ನು ಜವನಪ್ಪ ಮಲ್ಲಪ್ಪನ ಮಗ ಎಂದು ತೋರಿಸಲು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 19 ಅನ್ನು ಹಾಜರುಪಡಿಸುವ ಮೊದಲು ವಂಶವೃಕ್ಷವನ್ನು ಹಾಜರುಪಡಿಸಿದ್ದೆ ಎಂದರೆ ಸರಿ. ವಂಶವೃಕ್ಷದಲ್ಲಿ ರಾಚಪ್ಪನ ಮಗ ಮಲ್ಲಪ್ಪ ಎಂದು ಬರೆಸಿಲ್ಲ ಎಂದರೆ ಸರಿ. ವಂಶವೃಕ್ಷವನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಜವನಪ್ಪ ರಾಚಪ್ಪ ಮಲ್ಲಪ್ಪನ ಮಗ ಎಂದು ಸರ್ಕಾರದಿಂದ ಅಧೀಕೃತ ವಂಶವೃಕ್ಷವನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಿ.ಪಿ. 20 ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಆ ಮೂಲಕ ಪಡೆಯಲಾಗಿದೆ ಎಂದರೆ ಸರಿ. ಸದರಿ ಪ್ರಕರಣ ದಾಖಲಿಸುವ ಸಮಯದಲ್ಲಿ ಎದುರುದಾರರಿಗೆ ಯಾವುದೇ ನೋಟಿಸು ನೀಡಿರುವುದಿಲ್ಲ. ನಿ.ಪಿ. 19 ಮತ್ತು 24 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**